**Sanjevani, Bangalore, Aug 15 2012**

# ಸೇ. ಪಾಲ್ಸ್ ಇಂಗ್ಲಿಷ್ ಶಾಲಾ ಮಕ್ಕಳಿಗೆ ಗೆಲುವು

ಬೆಂಗಳೂರು, ಆ. ೧೫- ಟಿಸಿಎಸ್ ವತಿಯಿಂದ ಆಯೋಜಿಸಿದ್ದ ಟಿಸಿಎಸ್ ಐಟಿ ವಿಜ್ 2012 ಕಾರ್ಯಕ್ರಮದಲ್ಲಿ ಸೇಂಟ್ ಪೌಲ್ಸ್ ಇಂಗ್ಲಿಷ್ ಶಾಲೆಯ ಶಿಶಿರ್ ಉಮೇಶ್ ಮತ್ತು ಆಶ್ರಿತ್ ಎಸ್. ಭಾರದ್ವಾಜ್ ಪ್ರಥಮ ಸ್ಥಾನ ಹಾಗೂ ದ ಕುಮಾರನ್ ಚಿಲ್ಡ್ರನ್ಸ್ ಶಾಲೆಯ ಅತೀತ್. ಕೆ. ಮತ್ತು ಶುಭಂ ನಂದಿ ದ್ವಿತೀಯ ಸ್ಥಾನ ಗಳಿಸಿದರು.

ಈ ಸ್ಪರ್ಧೆಯಲ್ಲಿ 90 ಶಾಲೆಗಳು 1200 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದು, ನಗರ ಪೊಲೀಸ್ ಆಯುಕ್ತ ಬಿ.ಜಿ. ಜ್ಯೋತಿ ಪ್ರಕಾಶ್ ಮಿರ್ಜಿ ಮತ್ತು ಟಿಸಿಎಸ್ ಮುಖ್ಯಸ್ಥ ಹಾಗೂ ಉಪಾಧ್ಯಕ್ಷ ನಾಗರಾಜ್, ಐಜರಿ ಹಾಗೂ ಫೈನಾನ್ಷಿಯಲ್ ಸಲ್ಯೂಷನ್ ಅಧ್ಯಕ್ಷ ಎನ್. ಗಣಪತಿ ಸುಬ್ರಮಣ್ಯಂ, ಕೇಂದ್ರ ಮುಖ್ಯಸ್ಥ ಇ.ಎಸ್. ಚಕ್ರವರ್ತಿ ವಿಜೇತರಿಗೆ ಬಹುಮಾನ ವಿತರಿಸಿದರು.